SRI N. RACHIAH.—Even plans and estimates must have been received by the Directorate of Social Welfare and from that office by the Government. But for the time being funds are not available. We have to spend amount for completing the incomplete buildings. Therefore we are going to take up from the next financial year.

## ವಿಜಾಪುರ ಜಿಲ್ಲೆಯಲ್ಲಿ ದನಗಳು ಕುರಿಗಳು ಹಾಗೂ ಆಡುಗಳಲ್ಲಿ ರೋಗದಿಂದ ಬಳಲುತ್ತಿರುವುದು.

*೬೮೩. ಶ್ರೀ ಜೆ.ಎಲ್. ಕಬಾಡೆ (ಬಳ್ಳೊಳ್ಳಿ).—ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಬಿಜಾಪುರ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ (೧೯೭೫-೭೬) ದನಗಳು, ಕುರಿಗಳು ಹಾಗೂ ಆಡುಗಳು ಯಾವ ತಾಲ್ಲೂಕಿನಲ್ಲಿ ಯಾವ ರೋಗದಿಂದ ತೀರಿಹೋಗಿದೆ ಮತ್ತು ಯಾವ ರೋಗದಿಂದ ಎಷ್ಟು ಬಳಲುತ್ತಿವೆ (ತಾಲ್ಲೂಕುವಾರು ಅಂಕಿ ಸಂಖ್ಯೆಗಳನ್ನು ಒದಗಿಸಿ);

(ಆ) ಜಿಲ್ಲೆಯಲ್ಲಿ ದನಗಳು ಹಾಗೂ ಕುರಿ, ಆಡುಗಳು ಬೇನೆಗೊಳಗಾದಾಗ ತೀವ್ರ ಕ್ರಮ ಕೈಗೊಳ್ಳುವ ಬಗ್ಗೆ ಬೆಳಗಾವ ವಿಭಾಗಾಧಿಕಾರಿ ಹಾಗೂ ಬಿಜಾಪುರ ಜಿಲ್ಲಾಧಿಕಾರಿಗಳಿಗೆ ೧೯೭೫ ನವೆಂಬರ್, ಡಿಸೆಂಬರ್ ತಿಂಗಳಲ್ಲಿ ತಿಳಿಸಿ ಅದರಂತೆ ಪಶುಸಂಗೋಪನ ಜಿಲ್ಲಾಧಿಕಾರಿಗಳಿಗೆ ಸದರಿ ಅಧಿಕಾರಿಗಳು ಪಶುಗಳ ಬಗ್ಗೆ ಕಾಳಜಿ ವಹಿಸಲು ತಿಳಿಸಿದ್ದು ನಿಜವೆ ;

(ಇ) ಸರಿಯಾದ ವೇಳೆಗೆ ಪಶುಸಂಗೋಪನಾ ಜಿಲ್ಲಾಧಿಕಾರಿಗಳು ಔಷಧೋಪಚಾರ ಹಾಗೂ ಔಷಧಿಗಳನ್ನು ಒದಗಿಸದಿರುವುದರಿಂದ ಪಶುಗಳು ಅನಾಹುತಕ್ಕೆ ಈಡಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಈ) ಸಮಯಕ್ಕೆ ಉಪಚಾರ ನೀಡಲು ಬಾರದೆ ವಿಳಂಬ ಮಾಡಿರುವ ಜಿಲ್ಲಾಧಿಕಾರಿಯ ಮೇ[illegible] ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

(ಉ) ಪಶುಸಂಗೋಪನಾ ಜಿಲ್ಲಾ ವೈದ್ಯ ಅಧಿಕಾರಿಯು ಮೇಲೆ ಆಡಳಿತ ಅವ್ಯವಹಾರ ಮತ್ತು ದುರುಪಯೋಗಪಡಿಸಿಕೊಂಡ ಬಗ್ಗೆ ಏನಾದರೂ ವರದಿ ಹಾಗೂ ದೂರಗಳು ಬಂದಿವೆಯೇ ;

(ಊ) ಬಂದಿದ್ದರೆ, ಆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎನ್. ಚಿಕ್ಕೇಗೌಡ (ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು).—

(ಅ) ವಿವರಣೆ ಲಗತ್ತಿಸಿದೆ.

(ಆ) ಹೌದು.

(ಇ) ಇಲ್ಲ.

(ಈ) ಉದ್ಭವಿಸುವುದಿಲ್ಲ.

(ಉ) ಹೌದು.

(ಊ) ಇಲಾಖೆ ಅಧಿಕಾರಿಗಳ ಪರಿಶೀಲನೆಯಲ್ಲಿದೆ, ವರದಿಗಳು ಬಂದನಂತರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ರೋಗದಿಂದ ಬಳಲಿದ್ದು ಹಾಗೂ ತೀರಿಹೋಗಿರುವ ರಾಸುಗಳ ತಪಸೀಲು

| ತಾಲ್ಲೂಕು | | ಗಂಟಲುಬೇನೆ | | ಚಪ್ಪೆರೋಗ | | ಕಾಲುಬಾಯಿಬೇನೆ | | ಕುರಿಕರುಳಬೇನೆ | |
|---|---|---|---|---|---|---|---|---|---|
| | | ಬಳಲಿದ್ದ | ತೀರಿಹೋಗಿ | ಬಳಲಿದ್ದ | ತೀರಿಹೋಗಿ | ಬಳಲಿದ್ದ | ತೀರಿಹೋಗಿ | ಬಳಲಿದ್ದ | ತೀರಿಹೋಗಿ |
| ಇಂಡಿ | ... | ೧೫ | ೧೫ | ... | ... | ೩೯ | ... | ... | ... |
| ಸಿಂದಗಿ | ... | ೯ | ೯ | ೨೧ | ೨೧ | ... | ... | ... | ... |
| ಜಮಖಂಡಿ | ... | ೧೦ | ೧೦ | ೪ | ೪ | ೪೮ | ... | ... | ... |
| ಹುನಗುಂದ | ... | ೧೨ | ೧೨ | ೩ | ೩ | ೭೯ | ... | ... | ... |
| ಬಾಗೇವಾಡಿ | ... | ೩೨ | ೩೨ | ೫೦ | ೫೦ | ... | ... | ೧೬ | ೧೬ |
| ಮುದ್ದೇಬಿಹಾಳ್ | ... | ೨ | ೨ | ೧೯ | ೧೯ | ... | ... | ... | ... |
| ಬಿಳಗಿ | ... | ೬ | ೬ | ೩೩ | ೩೩ | ... | ... | ೪ | ೪ |
| ಬಾಗಲಕೋಟೆ | ... | ೪೨ | ೪೨ | ೩೮ | ೩೮ | ... | ... | ... | ... |
| ವಿಜಾಪುರ | ... | ೫ | ೫ | ೩೧ | ೩೧ | ... | ... | ... | ... |
| ಮುಧೋಳ್ | ... | ೨೪ | ೨೪ | ೧೩ | ೧೩ | ... | ... | ... | ... |
| ಬಾದಾಮಿ | ... | ೧೯೫ | ೧೦೫ | ೧೮ | ೧೮ | ... | ... | ೧೩ | ೧೩ |

ಶ್ರೀ ಜೆ. ಎಲ್. ಕಬಾಡೆ.—ಮಾನ್ಯ ಮಂತ್ರಿಗಳು, ನನ್ನ (ಉ) ಪ್ರಶ್ನೆಗೆ ಪಶುಸಂಗೋಪನಾ ಜಿಲ್ಲಾ ವೈದ್ಯಾಧಿಕಾರಿಯ ಮೇಲೆ ಆಡಳಿತ ಅವ್ಯವಹಾರ ಮಂತ್ತು ದುರುಪಯೋಗ ಪಡಿಸಿಕೊಂಡ ವರದಿ ಹಾಗೂ ದೂರುಗಳು ಬಂದಿವೆ ಎಂದು ಹೇಳಿದ್ದಾರೆ. ಹಾಗಿದ್ದರೆ. ಯಾವ ರೀತಿಯ ವರದಿ ಹಾಗೂ ದೂರುಗಳು ಬಂದಿವೆ ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ ?

† ಶ್ರೀ ಎನ್. ಚಿಕ್ಕೇಗೌಡ.—ಸದರಿ ವೈದ್ಯಾಧಿಕಾರಿಯ ಮೇಲಿನ ಸಂಬಂಧಪಟ್ಟ ವರದಿಯನ್ನು ಬೆಳಗಾವಿಯ ರೀಜಿನಲ್ ಡೆಪ್ಯುಟಿ ಡೈರೆಕ್ಟರ್ ಅವರಿಂದ ತರಿಸಿಕೊಂಡಿದ್ದೇವೆ. He is negligent rash, mischievous. disobedient and highly corrupt.

ಶ್ರೀ ಜೆ.ಎಲ್. ಕಬಾಡೆ.—ಈ ಪ್ರಕಾರವಾಗಿ ವರದಿ ಬಂದಿರುವುದರಿಂದ, ಈ ವೈದ್ಯಾಧಿಕಾರಿ ಮೇಲೆ ರೂಲ್ ೨೮೫ (೧) ರ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ವಿಚಾರ ಮಾಡಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಇವರ ಬಗ್ಗೆ ಪಶು ಸಂಗೋಪನಾ ಇಲಾಖೆಯ ನಿರ್ದೇಶಕರ ಅಭಿಪ್ರಾಯ ವನ್ನು ಕೇಳಿದ್ದೇವೆ. ಅವರ ಅಭಿಪ್ರಾಯ ಬಂದನಂತರ, ಆ ಅಧಿಕಾರಿ ಮೇಲೆ ಯಾವ ಕ್ರಮ ತೆಗೆದು ಕೊಳ್ಳಬೇಕೋ, ಆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರಿ ಜೆ.ಎಲ್. ಕಬಾಡೆ.—ಅಲ್ಲಿನ ಪ್ರತಿ ತಾಲ್ಲೂಕಿನಲ್ಲಿ ಗಂಟಲು ಬೇನೆ, ಚಪ್ಪೆರೋಗ, ಕಾಲುಬಾಯಿ ಬೇನೆ, ಮಂತ್ತು ಕುರಿಕರುಳಬೇನೆ ಕಾಯಿಲೆಗಳು ಬಂದು ಹಲವಾರು ಪ್ರಾಣಿಗಳು ಸತ್ತಿವೆ ಮತ್ತು ಬಳಲಿವೆ. ಅಂಥಾ ಸಂದರ್ಭದಲ್ಲಿ, ಆ ತಾಲ್ಲೂಕುಗಳಿಗೆ ಈ ವೈದ್ಯಾಧಿಕಾರಿ ಔಷಧಿಗಳನ್ನು ಕೊಡದೆ, ಉದಾಸೀನ ಮಾಡಿದ ರಿಂದ, ಆ ಪ್ರಾಣಿಗಳ ಸಾವಿಗೆ ಕಾರಣವಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎನ್. ಚಿಕ್ಕೇಗೌಡ —ರೋಗ ಬರುವುದಕ್ಕೆ ಅಧಿಕಾರಿ ಕಾರಣವಲ್ಲ. ಗಂಟಲಂ ಬೇನೆ, ಚಪ್ಪೆಜಾಡ್ಯ ರೋಗಗಳು ಬಂದರೆ, ಔಷಧಿ ಕೊಟ್ಟರೂ ಬದುಕುವುದಿಲ್ಲ.

ಶ್ರೀ ಕೊಣಂದೂರು ಲಿಂಗಪ್ಪ.—ರೋಗ ಬರುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬಹುದಲ್ಲ

ಶ್ರೀ ಎನ್. ಚಿಕ್ಕೇಗೌಡ.—ಈ ಪ್ರಯತ್ನ ರೋಗ ಬರುವುದಕ್ಕೆ ಮುಂಚೆ ಮಾಡಬೇಕು. ಆದರೆ, ಈ ರೋಗಗಳು ಬಂದ ಮೇಲೆ, ಅವುಗಳನ್ನು ತೆಡೆಗಟ್ಟಲು ಚುಚ್ಚುಮದ್ದುಗಳನ್ನು ಉಪಯೋಗಿಸಿದರೂ, ಪ್ರಯೋಜನವಿಲ್ಲ. ಆದರೆ, ರೋಗಗಳು ಬರುವುದಕ್ಕೆ ಮುಂಚೆ ಅಗತ್ಯವಾದ ಚಿಕಿತ್ಸೆ ನೀಡಿದ್ದರೆ, ಸ್ವಲ್ಪ ಮಟ್ಟಿಗೆ ಇದನ್ನು ತಪ್ಪಿಸಬಹುದು. ಆದರೆ, ಇಂಥಾ ಸಮಯದಲ್ಲಿ, ಈ ವೈದ್ಯಾಧಿಕಾರಿ ಸಾಕಷ್ಟು ಆಸಕ್ತಿ ವಹಿಸಿ, ಔಷಧಿಗಳನ್ನು ದೊರಕಿಸಿಕೊಡಲಿಲ್ಲ ಎನ್ನುವ ದೂರಿದೆ. ಆದರೆ, ರೋಗ ಬರುವುದಕ್ಕೆ ಆ ವೈದ್ಯಾಧಿಕಾರಿ ಕಾರಣನಲ್ಲ, ಹೆಚ್ಚು ಮಳೆಯಾಗಿ, ಬೆಳೆಗಳ ಮೇಲೆ ಒಂದು ರೀತಿಯ ಕ್ರಿಮಿಗಳು ಇದ್ದು, ಆ ಬೆಳೆಗಳನ್ನು ಪ್ರಾಣಿಗಳು ತಿಂದದ್ದರಿಂದ, ರೋಗ ಬಂದಿದೆ.

ಶ್ರೀ ಕೆ. ಎಚ್. ಹನುಮೇಗೌಡ —ದನಗಳು, ಕುರಿಗಳು, ಮತ್ತು ಆಡುಗಳಿಗೆ ಕಾಯಿಲೆ ಬರಬೇಕಾದರೆ, ಮೊದಲು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಕಾಯಿಲೆ ಬಂದು, ಆಮೇಲೆ ಎಲ್ಲ ಕಡೆಯೂ ಹರಡುತ್ತದೆ. ಇದರಿಂದ, ಪ್ರತಿ ವರ್ಷ ದನಗಳಿಗೆ ಕಾಯಿಲೆ ಸಂಭವಿಸುವ ಅವಕಾಶವಿದೆ. ಅದುದರಿಂದ, ಯಾವ ಜಾಗದಲ್ಲಿ ಮೊದಲು ಕಾಯಿಲೆ ಬಂತು ಎಂಬುದನ್ನು ಕಂಡುಹಿಡಿದು, ಅಲ್ಲಿರುವ ದನಗಳಿಗೆಲ್ಲಾ ನಿವಾರಣೋಪಾಯದ ಚುಚ್ಚುಮದ್ದುಗಳನ್ನು ಕೊಟ್ಟು, ರೋಗವನ್ನು ಹತೋಟಿಗೆ ತರಬೇಕಾಗಿದೆ. ಇನ್ನು ಎರಡನೆಯದಾಗಿ, ಕಾಯಿಲೆ ಬಂದ ದನಗಳನ್ನು ಕೆಲವರು ಸಂತೆಗಳಿಗೆ ತೆಗೆದುಕೊಂಡು ಹೋಗಿ ಮಾರಿಬಿಡುತ್ತಾರೆ. ಹೀಗೆ ಮಾಡಿದಂದರಿಂದ, ಕೂಡ ಒಂದಕ್ಕೊಂದು ಕಾಯಿಲೆ ಹರಡುತ್ತದೆ. ಆದುದರಿಂದ, ಕಾಯಿಲೆ ಬರುವ ಸೂಚನೆಗಳು ಕಂಡು ಬಂದ ತಕ್ಷಣವೇ ಅದನ್ನು ತಪ್ಪಿಸಲು ನಿವಾರಣೋಪಾಯದ ಚುಚ್ಚುಮದ್ದುಗಳನ್ನು ಹಾಕಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೆ ?

ಶ್ರೀ ಎನ್. ಚಿಕ್ಕೇಗೌಡ —ನಾನು ಅನೇಕ ಸಾರಿ ಈ ಸದನದಲ್ಲಿ, ರೈತರು, ತಮ್ಮ ದನಕರುಗಳಿಗೆ ಅಂಟುಜಾಢ್ಯಗಳು ಬಂದಾಗ, ಸಾಕಷ್ಟು ಆಸಕ್ತಿ ವಹಿಸಬೇಕೆಂದು ಹೇಳಿದ್ದೇನೆ. ಮಾನ್ಯ ಸದಸ್ಯ ಶ್ರೀ ಹನುಮೇಗೌಡರಿಗೆ ಗೊತ್ತಿರುವ ಹಾಗೆ ಸಾಮಾನ್ಯವಾಗಿ ಹಳ್ಳಿಗಳಲ್ಲಿ ದನಕರುಗಳಿಗೆ ಅಂಟುಜಾಢ್ಯ ಬಂದಾಗ, ಸಂಬಂಧಪಟ್ಟ ಪಶುವೈದ್ಯಾಧಿಕಾರಿಗಳಿಗೆ ತಿಳಿಸುವುದಿಲ್ಲ. ಅಂಥಾ ಸಂದರ್ಭಗಳಲ್ಲಿ ಊರಿನಲ್ಲಿ ಹಬ್ಬ ಮಾಡುವುದು; ದೇವರ ಉತ್ಸವ ಮಾಡುವುದು —ಹೀಗೆಲ್ಲಾ ಮಾಡುತ್ತಾರೆ: ಇದು ವಾಸ್ತವ ವಿಚಾರ. ಅಂಥ ರೋಗ ದನಗಳಿಗೆ ಬಂದು ದನಗಳು ಸತ್ತುಹೋದಾಗ ಅವುಗಳನ್ನು ಸರಿಯಾಗಿ ಹೂಳಬೇಕು: ಗ್ರಾಮಸಿವಾಸಿಗಳು ಆ ರೀತಿ ಹೂಳುವ ಕೆಲಸವನ್ನು ಮಾಡುವುದಿಲ್ಲ. ಸರ್ಕಾರ ಈಗ ಗಂಟಲು ಬೇನೆ ಚಪ್ಪೆರೋಗ, ಕಾಲುಬಾಯಿ ಬೇನೆ, ರೋಗಗಳನ್ನು ತಡೆಯಲಿಕ್ಕಾಗಿ ಚುಚ್ಚುಮದ್ದಿಗಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಮತ್ತೆ ಎರಡು ಕೋಟಿ ರೂಪಾಯಿಗಳ ಚುಚ್ಚುಮದ್ದುಗಳನ್ನು ಉತ್ಪಾದನೆ ಮಾಡತಕ್ಕ ಏರ್ಪಾಡು ಮಾಡಿದ್ದೇವೆ. ಈಗ ಮತ್ತೆ ಬೇಸಿಗೆ ಪ್ರಾರಂಭವಾದ ಮೇಲೆ ನೀರಿನ ಅಭಾವ ಬರುತ್ತದೆ: ಈಗ ಮತ್ತೆ ಕಾಲುಬಾಯಿ ಜ್ವರ ಶುರುವಾಗುತ್ತದೆ; ಅದರ ನಿವಾರಣೆಗೆ ಚುಚ್ಚುಮದ್ದುಗಳು ನಿತ್ಯಾವಶ್ಯಕವಾಗಿ ಬೇಕಾಗುತ್ತದೆ. ವಿಪರೀತ ಮಳೆಬಂದಾಗಲೂ ಈ ರೋಗಗಳು ಹರಡುತ್ತವೆ. ಅಲ್ಲದೆ ಹೊರ ರಾಜ್ಯಗಳಿಂದ ಬರತಕ್ಕ ರಾಸುಗಳಿಂದಲೂ ಈ ರೋಗ ಹರಡುತ್ತದೆ; ಈಗ ನಮ್ಮ ರಾಜ್ಯದಲ್ಲಿ ಕಾಲುಬಾಯಿ ಬೇನೆ ರೋಗವನ್ನು ಪೂರ್ತಿಯಾಗಿ ತಡೆಗಟ್ಟಿದ್ದೇವೆ. ಕಳೆದ ನಾಲ್ಕು ವರ್ಷಗಳಿಂದಲೂ ಈ ರೋಗ ನಿವಾರಣೆಗಾಗಿ ಸ್ಪೆಷಲ್ ಸ್ಕ್ವಾಡ್ ಇಟ್ಟು; ಜಾತ್ರೆಗಳಲ್ಲಿ, ಹಳ್ಳಿಹಳ್ಳಿಗಳಲ್ಲಿ ಚುಚ್ಚು ಮದ್ದು ಹಾಕುವ ವ್ಯವಸ್ಥೆ ಮಾಡಿದ್ದೇವೆ. ಈ ವರ್ಷದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಹೆಚ್ಚು ಮಳೆಯಾದುದರಿಂದಲೂ; ಹುಲ್ಲಿನ ಮೇಲಿರುವ ಒಂದು ರೀತಿಯ ರೋಗಾಣುಗಳಿಂದ ಜಾನುವಾರುಗಳಿಗೆ ಕಾಯಿಲೆ ಬಂದು ಸತ್ತುಹೋಗಿವೆ.

ಶ್ರೀ ಜೆ ಎಲ್. ಕಬಾಡೆ.—ಸ್ವಾಮಿ, ಈ ರೋಗ ಹರಡುತ್ತಿರುವಾಗಲೇ ಕೆಲವೊಂದು ಕಡೆ ಪ್ರಾಣಿಗಳು ಸತ್ತಿದ್ದಾಗ: ಡಿವಿಜನಲ್ ಕಮೀಷನರ್‌ರವರನ್ನು ಕಂಡು ಪ್ರಸ್ತಾಪ ಮಾಡಿದೆ; ಈ ಮುನ್ನ ಗ್ರಾಮಗಳ ಜನರಿಂದ ಸಾಕಷ್ಟು ಅರ್ಜಿಗಳನ್ನು ಈ ಖಾಯಿಲೆ ವಿಚಾರವಾಗಿ ಕೊಟ್ಟು ಬೇಡಿದರೂ ಸ್ಥಾನೀಯ ವೈದ್ಯಾಧಿಕಾರಿಗಳು ಔಷಧಿ ಸರಬರಾಜು ಮಾಡುವ ಬಗ್ಗೆ ಯಾವರೀತಿಯಲ್ಲೂ ಗಮನಕೊಡಲಿಲ್ಲ. ನಂತರ ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಡಿವಿಜನಲ್ ಕಮೀಷನರ್‌ರವರನ್ನು ಕಂಡಮೇಲೆ; ಅವರು ಸ್ವತಃ ಸಂಬಂಧಪಟ್ಟ ಅಧಿಕಾರಿಗೆ ಫೋನ್ ಮಾಡಿ ತಿಳಿಸಿದರು; ಸ್ಥಾನೀಯ ವೈದ್ಯಾಧಿಕಾರಿಗಳಂ ಜಾನುವಾರುಗಳ ಖಾಯಿಲೆ ವಿಚಾರದಲ್ಲಿ ಕಾಳಜೀ ವಹಿಸದೇ ಇರುವುದರಿಂದ ಪ್ರಾಣಿಗಳ ಅನಾಹುತಕ್ಕೆ ಕಾರಣವಾಯಿತು: ಈ ಅಧಿಕಾರಿ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎನ್. ಚಿಕ್ಕೇಗೌಡ.—ಡಿವಿಜನಲ್ ಕಮೀಷನರ್‌ರವರು ನಮ್ಮ ಇಲಾಖೆಯ ರೀಜನಲ್ ಡೆಪ್ಯೂಟಿ ಡೈರೆಕ್ಟರ್ ಬೆಳಗಾಂರವರಿಗೆ ಈ ಅಧಿಕಾರಿ ಬಗ್ಗೆ ವರದಿ ಕಳುಹಿಸಿ ಕೊಟ್ಟಿದ್ದಾರೆ. ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಆ ಅಧಿಕಾರಿಯ ಮೇಲೆ ತಕ್ಕಗತ್ಕಪಾದ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ. ಈಗಾಗಲೇ ಅವರನ್ನು ಅಲ್ಲಿಂದ ವರ್ಗ ಮಾಡಬೇಕೆಂದು ಆದೇಶಕೊಟ್ಟಿದ್ದೇನೆ; ಅವರ ಮೇಲೆ ಏನು ಅಪಾದನೆಗಳು ಇವೆ, ಅವುಗಳನ್ನು ಕೆ. ಸಿ. ಎಸ್. ಆರ್. ಪ್ರಕಾರ ಪರಿಶೀಲನೆ ಮಾಡಿ; ಶಿಕ್ಷೆ ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ.

MADAM SPEAKER: Now Questions are over.

## QUESTIONS FOR ANSWERS FOR THE DAY
## (But not taken up)

### Separation of Wadi Village Panchayat

514 SMT. VIJAYA DESAI (Chittapur)—Will the Minister for Rural Development and Social Welfare be pleased to state.—

(*a*) whether representations were made to Government regarding separation of Wadi Village Panchayat from Halkatta, Rancor village Panchayats;

(*b*) if so, whether the final notification has been issued;

(*c*) if so, the reasons for delay in implementing the same?

SRI N. RACHAIAH (Minister for Rural Development and Social Welfare);

(*a*) Yes.

(*b*) Yes Final notification has been issued declaring WADI as independent Town Panchayat.

(*c*) The Wadi Village does not find a place in the Revenue Record as revenue village. The proposal is perding in Survey and Settlement Department for demarcation work of Revenue lands to be included in Wadi village.

### Inadequate Accommodation for Junior College at Afzalpur

560 SRI B. D. KALMANKAR (Afzalpur).—Will the Minister for Education be pleased to state;—

(*a*) whether there is a Junior College in the existing building of the Government High School at Afzalpur;